# ಮುಂಬೈ ವೈಭವಿಯ ಕನ್ನಡ ವೈಭವ!



**ಮುಂಬೈ ಮೂಲದ ವೈಭವಿ ಶಾಂಡಿಲ್ಯ, ಚಂದನವನದಲ್ಲಿ ಮೆಲ್ಲಗೆ ಅರಳತೊಡಗಿದ್ದಾರೆ. 'ಗಾಳಿಪಟ 2' ಸಿನಿಮಾದ ಗೆಲುವು, 'ಮಾರ್ಟಿನ್' ಸಿನಿಮಾದ ಕುರಿತ ನಿರೀಕ್ಷೆಯ ಕುರಿತು ತುಂಬ ಉತ್ಸಾಹದಿಂದ ಮಾತಾಡುವ ಅವರು, ಕನ್ನಡದ ನೆಲದಲ್ಲಿ ಇನ್ನಷ್ಟು ಚಿತ್ರಗಳಲ್ಲಿ ನಟಿಸುವ ಸೂಚನೆಯನ್ನೂ ನೀಡುತ್ತಾರೆ.**

**■ ಪದ್ಮನಾಭ ಭಟ್**

**2015** ತೆರೆ ಕಂಡ 'ರಾಜ್ ವಿಷ್ಣು' ಸಿನಿಮಾದಲ್ಲಿ ಕನ್ನಡ ಸಿನಿಪ್ರಿಯರಿಗೆ ಪರಿಚಯಗೊಂಡ ಹುಡುಗಿ ವೈಭವಿ ಶಾಂಡಿಲ್ಯ. ದುಂಡುಮುಖದ, ಹೊಳಪುಗಣ್ಣಿನ ಈ ಬೆಡಗಿಯನ್ನು ನೋಡಿದ ಹಲವರು, ಈ ಹುಡುಗಿ ಗಾಂಧಿನಗರದಲ್ಲಿ ಬಹುಬೇಡಿಕೆಯ ನಟಿಯಾಗುತ್ತಾಳೆ ಎಂಬ ಭವಿಷ್ಯವನ್ನೂ ನುಡಿದಿದ್ದರು. ಅವರ ಭವಿಷ್ಯ ಶೀಘ್ರವಾಗಿಯೇನೂ ಸತ್ಯವಾಗಲಿಲ್ಲ. 2017ರ ನಂತರ ವೈಭವಿ ಮತ್ತೆ ಕರುನಾಡ ಹಿರಿತೆರೆಯಲ್ಲಿ ಕಾಣಿಸಿಕೊಂಡಿದ್ದು 2022ರಲ್ಲಿ 'ಗಾಳಿಪಟ 2' ಸಿನಿಮಾ ಮೂಲಕ.

ವೈಭವಿ ಮುಂಬೈ ಮಹಾನಗರದಲ್ಲಿ ಹುಟ್ಟಿಬೆಳೆದ ಹುಡುಗಿ. 'ಮುಂಬೈ ಮಿಶ್ರ ಸಂಸ್ಕೃತಿಯ ನಗರ. ಹಾಗಾಗಿ ನಾನು ಮರಾಠಿಯ ಜೊತೆಜೊತೆಗೇ ಹಿಂದಿ, ಗುಜರಾತಿ, ಇಂಗ್ಲಿಷ್ ಭಾಷೆಗಳನ್ನೂ ಕಲಿಯುತ್ತಲೇ, ಆ ಭಾಷೆಯ ಸ್ನೇಹಿತರೊಟ್ಟಿಗೆ ಒಡನಾಡುತ್ತಲೇ ಬೆಳೆದೆ. ಹಾಗಾಗಿ ಈಗಲೂ ನನಗೆ ಯಾವುದಾದರೂ ಹೊಸ ಭಾಷೆ ಕಲಿತುಕೊಳ್ಳುವುದು ತುಂಬ ಕಷ್ಟವಾಗುವುದಿಲ್ಲ. ಕನ್ನಡವನ್ನೂ ತಕ್ಕಮಟ್ಟಿಗೆ ಕಲಿತುಕೊಂಡಿದ್ದೇನೆ' ಎಂದು ಇಂಗ್ಲಿಷಿನಲ್ಲಿಯೇ ಉಸುರುವ ವೈಭವಿಗೆ ನಟಿಯಾಗಬೇಕು ಎಂಬುದು ಬಾಲ್ಯದ ಕನಸೇ ಆಗಿತ್ತಂತೆ. ಆದರೆ ಆ ಕನಸು ನನಸಾಗುತ್ತದೆ ಎಂಬ ಗಟ್ಟಿನಂಬಿಕೆಯಂತೂ ಅವರಿಗೆ ಇರಲಿಲ್ಲ. ಯಾಕೆಂದರೆ ಅವರ ಮನೆಯಲ್ಲಿ ಯಾರೂ ಸಿನಿಮಾರಂಗದ ಹಿನ್ನೆಲೆಯವರಿರಲಿಲ್ಲ. ಸಿನಿಮಾ ರಂಗಕ್ಕೆ ಪ್ರವೇಶ ಪಡೆಯುವುದು ಹೇಗೆ ಎಂಬುದೂ ಅವರಿಗೆ ಗೊತ್ತಿರಲಿಲ್ಲ.

'ನಾನು ಕಾನೂನು ವಿದ್ಯಾರ್ಥಿನಿ. ಕಾಲೇಜಿಗೆ ಹೋಗುತ್ತಿದ್ದಾಗಲೇ ನನಗೆ ಆಗೀಗ ಧಾರಾವಾಹಿಗಳು, ಟೀವಿ ಷೋಗಳಿಗೆ ಅವಕಾಶಗಳು ಬರತೊಡಗಿದ್ದವು. ಅದರಿಂದ ನನ್ನ ಬಾಲ್ಯದ ಕನಸಿಗೆ ಮತ್ತೆ ಜೀವ ಬಂದಂತಾಗಿತ್ತು. ಹಾಗೆಯೇ ಒಂದು ಟೀವಿ ಶೋಗೆ ಒಪ್ಪಿಕೊಂಡೆ. ನಾನು ಭರತನಾಟ್ಯಂ ಮತ್ತು ಕೂಚಿಪುಡಿ ನೃತ್ಯಗಳನ್ನೂ ಕಲಿತಿದ್ದೇನೆ. ಹಾಗಾಗಿ ನಟನೆಯ ಅಭಿವ್ಯಕ್ತಿ ನನಗೆ ಕಷ್ಟವಾಗುವುದಿಲ್ಲ ಎಂಬ ವಿಶ್ವಾಸವಿತ್ತು. ಆದರೆ ಮೊದಲ ಬಾರಿಗೆ ಕ್ಯಾಮೆರಾ ಎದುರಿಸಿದಾಗ ಅದು ಬೇರೆಯೇ ಕೌಶಲಗಳನ್ನು ಬೇಡುವ ಕಲೆ ಎಂಬುದು ತಿಳಿಯಿತು. ಅದಕ್ಕಾಗಿ ನಾನು ನಟನಾ ತರಬೇತಿ ಕೋರ್ಸ್ ಮಾಡಿದೆ. ಅದರ ಕುರಿತು ಅಧ್ಯಯನ ಮಾಡಿದೆ. ತಾಲೀಮೂ ಮಾಡಿದೆ' ಎಂದು ನಟನೆಯ ಕಲೆಯನ್ನು ತಮ್ಮದಾಗಿಸಿಕೊಂಡ ಬಗೆಯನ್ನು ವಿವರಿಸುತ್ತಾರೆ ಅವರು.

2016 'ಏಕ್ ಅಲ್‌ಬೇಲಾ' ಎಂಬ ಮರಾಠಿ ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ ವೈಭವಿ ನಂತರ ತಮಿಳು, ತೆಲುಗು, ಕನ್ನಡ ಭಾಷೆಯ ಸಿನಿಮಾಗಳಲ್ಲಿ ನಟಿಸಿದ್ದಾರೆ. 2017ರಲ್ಲಿ ನಟಿಸಿದ 'ರಾಜ್ ವಿಷ್ಣು' ಅವರ ಮೂರನೇ ಸಿನಿಮಾ. ಅದಾದ ಎರಡು ವರ್ಷಕ್ಕೆ